MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - SATURDAY 15-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಸತತ ಎರಡನೇ ದಿನ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 2ನೇ ದಿನ ಇಳಿಕೆಯಾಗಿ (1.59 ಶೇಕಡಾ) ಟನ್‌ಗೆ 3715 ರಿಂಗಿಟ್ಸ್ ($ 844.70) ಆಗಿದೆ. ಪರ್ಯಾಯ ಖಾದ್ಯ ತೈಲ ದರ ಇಳಿಕೆ ಪಾಮೆಣ್ಣೆಯ ದರದ ಮೇಲೆ ಪ್ರಭಾವ ಬೀರಿದೆ.

## ಬರ, ಬಯೋಡೀಸೆಲ್, ಸೋಯಾಬೀನ್ ಎಣ್ಣೆ ದರ, ರಫ್ತು ಮೇಲೆ ಪರಿಣಾಮ

ಅಧಿಕ ಕೈಗಾರಿಕಾ ಬಳಕೆ, ಬಿಗು ರಫ್ತು ಯೋಗ್ಯ ಪೂರೈಕೆಯಿಂದ ಸೋಯಾಬೀನ್ ಎಣ್ಣೆ ಜಾಗತಿಕ ಬಳಿಕೆ 2022–23 ರಲ್ಲಿ 30 ಶೇಕಡಾ ಇಳಿಕೆಯಾಗಲಿದೆಯೆಂದು ಹಾಗೂ ಈ ಪರಿಸ್ಥಿತಿ ಈ ದಸಕಾವಧಿಯಲ್ಲಿ ಪ್ರಥಮಬಾರಿಯಾಗಿದೆಯೆಂದು USDA ವರದಿಮಾಡಿದೆ. U.S ಉತ್ಪಾದನೆಯ 44 ಶೇಕಡಾ ಸೋಯಾಬೀನ್ ಎಣ್ಣೆ ಬಯೋ ಇಂಧನಕ್ಕೆ ಬಳಕೆಯಾಗಲಿದೆಯೆನ್ನಲಾಗಿದೆ. 2 ವರ್ಷಗಳ ಹಿಂದೆ ಸೋಯಾ ಎಣ್ಣೆಯ ಬಯೋ ಇಂಧನ ಬಳಕೆ ಪಾಲು ಶೇಕಡಾ 37 ಆಗಿತ್ತೆನ್ನಲಾಗಿದೆ. ಬಯೋಡೀಸೆಲ್‌ಗೆ ಬ್ರೆಜಿಲ್‌ನ ಸೋಯಾಬೀನ್ ಎಣ್ಣೆ ಬಳಕೆ 12 ಶೇಕಡಾವಾಗಿದೆಯೆನ್ನಲಾಗಿದೆ.

## ಮಧ್ಯಪ್ರದೇಶದ ಶರಾಬತಿ ಗೋಧಿಗೆ GI ಟ್ಯಾಗ್

ಗೋಲ್ಡನ್ ಗ್ರೈನ್ ಎಂದು ಕರೆಯಲ್ಪಡುವ ಮಧ್ಯಪ್ರದೇಶದ ಶರಾಬತಿ ಗೋಧಿಗೆ (SHARABATI WHEAT) GI TAAG (GEOGRAGHICAL INDENTIFICATION) ಲಭ್ಯವಾಗಿದೆಯೆನ್ನಲಾಗಿದೆ. ಶರಾಬತಿ ಗೋಧಿಯ ಗೋಧಿ ಹುಡಿ ಉತ್ಕೃಷ್ಟ ದರ್ಜೆಯದ್ದೆನ್ನಲಾಗಿದೆ. ಇದರ ಬೆಲೆಯೂ ಅಧಿಕ.

## ಜಾಗತಿಕ ಕಾಫಿ ದರ ಹೆಚ್ಚಳ

ಪೂರೈಕೆಯ ಕಳವಳದಿಂದ ಜಾಗತಿಕ ಕಾಫಿ ದರ ತೀವ್ರ ಹೆಚ್ಚಳ ಕಂಡಿದೆಯೆನ್ನಲಾಗಿದೆ. ರಾಬೆಸ್ಟಾ ಕಾಫಿ ದರ 11 1/2 ವರ್ಷದ ಗರಿಷ್ಠ ಮಟ್ಟ ಹಾಗೂ ಅರೆಬಿಕಾ 6 ತಿಂಗಳ ಗರಿಷ್ಠ ಮಟ್ಟ ತಲುಪಿದೆಯೆನ್ನಲಾಗಿದೆ.